## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿ ಸ್ಥಾಪಿತವಾಗಿರುವ ವಿಶಿಷ್ಟ ಕೌಶಲ್ಯ ಅಭಿವೃದ್ಧಿ ಸಂಸ್ಥೆಗಳ ಅಭಿವೃದ್ಧಿಗಾಗಿ ಮತ್ತು ಅವುಗಳ ಮೂಲಕ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲು ಮೂಲಭೂತ ಸೌಕರ್ಯ ಒದಗಿಸುವ ಬಗ್ಗೆ ಬಂಡವಾಳ ಹೂಡಿಕೆ ಮತ್ತು ಇತರೆ ವೆಚ್ಚಗಳ ನಿರ್ವಹಣೆಗೆ ಮಾರ್ಗಸೂಚಿಗಳು.

ಓದಲಾಗಿದೆ:

(1) ಆಯುಕ್ತರು ಕೈಗಾರಿಕಾ ಅಭಿವೃದ್ಧಿ ಮತ್ತು ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಪತ್ರ ಸಂಖ್ಯೆ ಕೈವಿಆ1/:ವಿ.ಆ.ಯೋ. ಮಾ.ಸೂ. 04-2016-17 ದಿನಾಂಕ 10.05.2016 ಮತ್ತು

(2) ಆಯುಕ್ತರು ಕೈಗಾರಿಕಾ ಅಭಿವೃದ್ಧಿ ಮತ್ತು ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಪತ್ರ ಸಂಖ್ಯೆ ಕೈವಾಇ/ಜಿಕೈಕೇ/ಸಿ2/01/ ಮಾರ್ಗಸೂಚಿ/2016-17 ದಿನಾಂಕ 10-06-2016.

ಕ್ರಮಾಂಕ 1428
30 JUN 2016

ಪ್ರಸ್ತಾವನೆ

ವಿಶಿಷ್ಟ ಕೌಶಲ್ಯ ಅಭಿವೃದ್ಧಿ ಸಂಸ್ಥೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನಾ ಚಟುವಟಿಕೆಯನ್ನು ಸಣ್ಣ ಪ್ರಮಾಣ ಕೈಗಾರಿಕಾ ಕ್ಷೇತ್ರದ ಆಯವ್ಯಯ ಅನುದಾನದಡಿಯಲ್ಲಿ 2015-16ನೇ ಸಾಲಿನವರೆಗೆ ಅನುಷ್ಠಾನಿಸಲಾಗುತ್ತಿದ್ದು, 2016-17ನೇ ಸಾಲಿನಲ್ಲಿ ಯೋಜನಾ ಚಟುವಟಿಕೆಯನ್ನು ಅನುಷ್ಠಾನ ಮಾರ್ಗಸೂಚಿಗಳನ್ನು ಮರುರೂಪಿಸುವ ಅಗತ್ಯವು ಕಂಡುಬಂದಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ (1) ಮತ್ತು (2) ಪತ್ರಗಳಲ್ಲಿ ಸದರಿ ಉದ್ದೇಶಕ್ಕಾಗಿ ಕೈಗಾರಿಕಾ ಆಯುಕ್ತರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಯೋಜನಾ ಚಟುವಟಿಕೆಯ ರೂಪುರೇಷೆಯು ಈ ಕೆಳಗಿನಂತಿರುತ್ತದೆ:

ಕೈಗಾರಿಕಾ ನೀತಿ 2014-19ರಲ್ಲಿ ಘೋಷಿತವಾದಂತೆ ರಾಜ್ಯದ ನಿರುದ್ಯೋಗಿ ಯುವಕ ಯುವತಿಯರಿಗೆ ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸಲು ಅಥವಾ ಸ್ವಂತ ಉದ್ಯೋಗ ಅವಕಾಶಗಳನ್ನು ಒದಗಿಸುವ ಉದ್ದೇಶದಿಂದ ಸಾಮರ್ಥ್ಯ ಸಾಧ್ಯತೆಯಿರುವ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಕ್ಷೇತ್ರದ ಸಕ್ರಿಯ ಭಾಗವಹಿಸುವಿಕೆಯನ್ನು ಪಡೆದು ಕುಶಲ ಮತ್ತು ವೃತ್ತಿಪರ ಮಾನವ ಸಂಪನ್ಮೂಲದ ಬಲವರ್ಧನೆಗಾಗಿ ವಿಶಿಷ್ಟ ಕೌಶಲ್ಯಾಭಿವೃದ್ಧಿ ಮತ್ತು ವೃತ್ತಿಪರ ತರಬೇತಿಯನ್ನು ನೀಡಲು ರಾಜ್ಯದಲ್ಲಿ ಸ್ಥಾಪಿತವಾದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ಮತ್ತು ಅದರ ಉಪಕೇಂದ್ರಗಳು, ಕಿಲ್ಟ್ (Karnataka Institute of Leather Technology)

ಹಾಗೂ ಇತರೆ ಕುಶಲ ಕರ್ಮಿ ತರಬೇತಿ ಸಂಸ್ಥೆಗಳಿಗೆ ಅಗತ್ಯವಿರುವ ಕಾರ್ಯಾಗಾರ, ತರಬೇತಿ ಕಟ್ಟಡ/ಕೊಠಡಿಗಳು, ವಸತಿ ನಿಲಯಗಳು, ಪ್ರಯೋಗಾಲಯ, ಆಧುನಿಕ ಯಂತ್ರೋಪಕರಣಗಳು ಮತ್ತು ಉಪಕರಣಗಳನ್ನು ಒದಗಿಸುವುದು. ಈ ರೂಪರೇಷೆಗಳ ಚೌಕಟ್ಟಿನಲ್ಲಿ ಆಯವ್ಯಯದಲ್ಲಿ ಒದಗಿಸಲಾಗುವ ಯೋಜನಾ ವೆಚ್ಚವನ್ನು ಭರಿಸಲು 2016–17ನೇ ಸಾಲಿನಿಂದ ಜಾರಿಗೆ ಬರುವಂತೆ ಸೂಕ್ತವಾಗಿ ಮಾರ್ಗಸೂಚಿಗಳನ್ನು ಮರುರೂಪಿಸುವ ಅಗತ್ಯವೆನಿಸಿದೆ. ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ವಾಕೈ 46 ಸಪ್ರಕೈ 2016, ಬೆಂಗಳೂರು, ದಿನಾಂಕ 25.06.2016</u>**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಯೋಜನಾ ಆಯವ್ಯಯದ ಸಂಪನ್ಮೂಲಗಳನ್ನು ಬಳಸಿಕೊಂಡು ವಿಶಿಷ್ಟ ಕೌಶಲ್ಯಾಭಿವೃದ್ಧಿ ಸಂಸ್ಥೆಗಳ ಸ್ಥಾಪನೆ, ಅವುಗಳ ನಿರ್ವಹಣೆಗಾಗಿ ಕಾರ್ಯಾಗಾರ ನಿರ್ಮಾಣ, ತರಬೇತಿ ಕೊಠಡಿಗಳ, ಯಂತ್ರೋಪಕರಣಗಳನ್ನು ಒದಗಿಸುವುದು ಇತ್ಯಾದಿ ಯೋಜನಾ ಚಟುವಟಿಕೆಗಳ ಅನುಷ್ಠಾನ ಮಾರ್ಗಸೂಚಿಗಳನ್ನು 2016–17ನೇ ಸಾಲಿನಿಂದ ಜಾರಿಗೆ ಬರುವಂತೆ ಮುಂದಿನ ಆದೇಶದ ವರೆಗೆ ಈ ಕೆಳಗಿನಂತೆ ಮರುರೂಪಿಸಲಾಗಿದೆ.

**(ಅ) ಯೋಜನಾ ಕಾರ್ಯಕ್ರಮದ ಹೆಸರು**

ವಿಶಿಷ್ಟ ಕೌಶಲ್ಯಾಭಿವೃದ್ಧಿ ಸಂಸ್ಥೆಗಳ ಅಭಿವೃದ್ಧಿ ಮತ್ತು ಅವುಗಳ ಮೂಲಕ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳ ನಿರ್ವಹಣೆ

**(ಆ) ಯೋಜನಾ ಕಾರ್ಯಕ್ರಮವನ್ನು ಅನುಷ್ಠಾನ ಜವಾಬ್ದಾರಿಯಿರುವ ವಿಶಿಷ್ಟ ಕೌಶಲ್ಯಾಭಿವೃದ್ಧಿ ಸಂಸ್ಥೆಗಳು**

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ಮತ್ತು ಅದರ ಉಪಕೇಂದ್ರಗಳು, ಕಿಲ್ಟ್ (Karnataka Institute of Leather Technology) ಹಾಗೂ ಇತರೆ ಕುಶಲ ಕರ್ಮಿ ತರಬೇತಿ ಸಂಸ್ಥೆಗಳು ಮತ್ತು ಹಾಗೂ ಸರ್ಕಾರಿ ಸ್ವಾಮ್ಯದ ಇತರೆ ಸಂಸ್ಥೆಗಳು.

**(ಇ) ವಿಶಿಷ್ಟ ಕೌಶಲ್ಯಾಭಿವೃದ್ಧಿ ಸಂಸ್ಥೆಗಳು ಸೌಕರ್ಯಗಳ ಅಭಿವೃದ್ಧಿ ಮತ್ತು ನಿರ್ವಹಣಾ ಪ್ರಸ್ತಾವನೆಯಲ್ಲಿ ಒದಗಿಸಬೇಕಾದ ಅಂದಾಜು ವೆಚ್ಚದ ವಿವರಗಳು**

(a) ಕಟ್ಟಡ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು.

(b) ಹೊಸ ಸಂಸ್ಥೆ/ ಕೇಂದ್ರವಾಗಿದ್ದಲ್ಲಿ ಸರ್ಕಾರದ ಅನುಮೋದಿತ ಆದೇಶ.

(c) ಸಂಸ್ಥೆಯ ಹೆಸರಿನಲ್ಲಿ ಭೂಮಿ/ ಕಟ್ಟಡ ಇರುವ ಬಗ್ಗೆ ದಾಖಲಾತಿಗಳು.

(d) ಕಟ್ಟಡದ ನೀಲಿ ನಕ್ಷೆ.

(e) ಪ್ರಸಕ್ತ ಸಾಲಿನ ಎಸ್.ಆರ್. ದರದಂತೆ ಅಂದಾಜು ಪಟ್ಟಿ.

(f) ಉದ್ದೇಶಿತ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ತಯಾರಿಸಿದ ಪರ್ಟ್ ಚಾರ್ಟ್

(g) ಕಟ್ಟಡದ ಅವಶ್ಯಕತೆ ಬಗ್ಗೆ ವಿಸ್ತೃತವಾದ ವರದಿ ಹಾಗೂ ನಿರ್ಮಾಣ ಸಂಸ್ಥೆಯ ವಿವರಗಳೊಂದಿಗೆ.

(h) ಹೊಸ ಕೇಂದ್ರವಾಗಿದ್ದಲ್ಲಿ ವಿವರವಾದ ಯೋಜನಾ ವರದಿ (ಡಿ.ಪಿ.ಆರ್).

(i) ಕಾಮಗಾರಿಯ ನಿರ್ಮಾಣಕ್ಕೆ ಆಡಳಿತ ಪರಿಷತ್ನ ಸಮಿತಿಯ ಅನುಮೋದನೆ ಪಡೆದಿರುವ ಪ್ರತಿ.

(j) ಕೇಂದ್ರದಲ್ಲಿ ಈಗಾಗಲೇ ಇರುವ ಕಟ್ಟಡಗಳ ವಿವರ ಹಾಗೂ ಅವುಗಳ ಬಳಕೆ ಬಗ್ಗೆ ವಿವರಣೆ.

(k) ಸದರಿ ಕೇಂದ್ರಗಳಿಗೆ ಈಗಾಗಲೇ ಸರ್ಕಾರದಿಂದ ವಿವಿಧ ಯೋಜನೆಗಳಡಿ ಬಿಡುಗಡೆ ಮಾಡಿರುವ ಅನುದಾನ, ಬಳಕೆ ಹಾಗೂ ಬಳಕೆ ಪ್ರಮಾಣ ಪತ್ರ ಸಲ್ಲಿಸಿರುವ ಕುರಿತಂತೆ ವಿವರ.

(l) ಕಟ್ಟಡದ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಗುಣಮಟ್ಟದ ತಪಾಸಣಾ ವರದಿಯನ್ನು 3ನೇ ವ್ಯಕ್ತಿ/ ಸಂಸ್ಥೆಯಿಂದ ಮಾಡಿಕೊಳ್ಳತಕ್ಕದ್ದು.

(m) ಯಂತ್ರೋಪಕರಣಗಳು

## ಪ್ರಸ್ತಾವನೆಯಲ್ಲಿ ವಿವರಿಸಿದ ಆಯವ್ಯಯ ಸಂಪನ್ಮೂಲಗಳಿಂದ ಭರಿಸುವ ಯೋಜನಾ ಕಾರ್ಯಕ್ರಮಗಳ ವಿವಿಧ ಘಟಕಗಳ ಅನುಷ್ಠಾನಕ್ಕೆ ಅನುದಾನ ವಿನಿಯೋಗ ಮಾರ್ಗಸೂಚಿಗಳು

ವಿಶೇಷ ಅಭಿವೃದ್ಧಿ ಯೋಜನೆ, ವಿಶೇಷ ಅಭಿವೃದ್ಧಿ ಯೋಜನೆ– ವಿಶೇಷ ಘಟಕ ಯೋಜನೆ, ವಿಶೇಷ ಅಭಿವೃದ್ಧಿ ಯೋಜನೆ, ವಿಶೇಷ ಅಭಿವೃದ್ಧಿ ಯೋಜನೆ– ಗಿರಿಜನ ಉಪ ಯೋಜನೆ ಮತ್ತು ಹೈದಾರಬಾದ್ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಯೋಜನೆ ಅಡಿಯಲ್ಲಿನ ಅನುದಾನ.

## ಅನುದಾನ ವಿನಿಯೋಗ ಮಾರ್ಗಸೂಚಿಗಳು

ಡಾ. ಡಿ.ಎಂ. ನಂಜುಂಡಪ್ಪನವರ ಸಮಿತಿಯ ವರದಿಯನ್ವಯ ರಾಜ್ಯದ ಪ್ರಾದೇಶಿಕ ಅಸಮತೋಲನ ನಿವಾರಿಸಲು ರಚಿಸಲಾಗಿರುವ ಉನ್ನತಾಧಿಕಾರ ಸಮಿತಿಯ ಶಿಫಾರಸ್ಸಿನಂತೆ, ವಿಶೇಷ ಅಭಿವೃದ್ಧಿ ಯೋಜನೆಯನ್ನು 2007–08ನೇ ಸಾಲಿನಿಂದ ರಾಜ್ಯದಲ್ಲಿ ಅನುಷ್ಠಾನಿಸಲಾಗುತ್ತಿದೆ. ಈ ಸಂಬಂಧ ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆಯು 2010–11ರಲ್ಲಿ ವಿಶೇಷ ಅಭಿವೃದ್ಧಿ ಯೋಜನೆ ಅನುಷ್ಠಾನ ಮಾರ್ಗಸೂಚಿಗಳಂತೆ ರಾಜ್ಯದ 04 ವಿಭಾಗಗಳಾದ ಗುಲ್ಬರ್ಗಾ, ಬೆಂಗಳೂರು, ಬೆಳಗಾವಿ ಮತ್ತು ಮೈಸೂರು ವಿಭಾಗಗಳಿಗೆ, ಈ ಪ್ರದೇಶಗಳಲ್ಲಿ ಗುರುತಿಸಲಾದ ಅತ್ಯಂತ, ಅತೀ ಹಾಗೂ ಹಿಂದುಳಿದ ತಾಲ್ಲೂಕುಗಳಲ್ಲಿರುವ

ನಿರುದ್ಯೋಗಿ ಯುವಕರಿಗೆ ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶ ಮತ್ತು ಸ್ವಂತ ಉದ್ದಿಮೆಗಳ ಸ್ಥಾಪನೆಗಾಗಿ ಅನುಕೂಲಗಳನ್ನು ಒದಗಿಸಲು ವಾರ್ಷಿಕ ಕಾರ್ಯಯೋಜನೆಯನ್ನು ಸಿದ್ಧಪಡಿಸಿಕೊಂಡು ವಾರ್ಷಿಕ ಆಯವ್ಯಯದ ಅನುದಾನದ ಮೊತ್ತಕ್ಕೆ ವಿಭಾಗಾವಾರು ಶೇ. 40%, ಬೆಳಗಾವಿ ಶೇ. 20%, ಬೆಂಗಳೂರು ಶೇ. 25% ಹಾಗೂ ಮೈಸೂರು ಶೇ. 15%ರಷ್ಟು ಹಂಚಿಕೆ ಮಾಡಿಕೊಂಡ ಕಾರ್ಯಯೋಜನೆಗೆ ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆಯ ಮಂಜೂರಾತಿಯನ್ನು ಪಡೆದ ನಂತರ ಆರ್ಥಿಕ ಇಲಾಖೆಯು ಕಾಲ ಕಾಲಕ್ಕೆ ನಿಗಧಿಸಿದ ರೀತಿಯಲ್ಲಿ ಅನುದಾನವನ್ನು ಬಿಡುಗಡೆಗೊಳಿಸತಕ್ಕದ್ದು. ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆಯು ಆಯಾ ವರ್ಷದ ಆಯವ್ಯಯದಲ್ಲಿ ಇಲಾಖೆಗೆ ನಿಗಧಿಪಡಿಸಿರುವ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ಸಂಬಂಧಪಟ್ಟ ಅನುಷ್ಠಾನಗಳ ಆರ್ಥಿಕ ಪ್ರಸ್ತಾವನೆಗೆ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆಯ ಅನುಮೋದನೆ/ಸಹಮತಿಯನ್ನು ಪಡೆಯತಕ್ಕದ್ದು.

**ನಬಾರ್ಡ್ ಕಾಮಗಾರಿಗಳು**

**ಅನುದಾನ ವಿನಿಯೋಗ ಮಾರ್ಗಸೂಚಿಗಳು**

ನಬಾರ್ಡ್ ನೆರವಿನಲ್ಲಿ ಕಟ್ಟಡ ವೆಚ್ಚಗಳು (ನಬಾರ್ಡ್ ಕಾಮಗಾರಿಗಳು)ನಬಾರ್ಡ್–ಪರಿಶಿಷ್ಟ ಜಾತಿ ಉಪ ಯೋಜನೆ, ನಬಾರ್ಡ್–ಗಿರಿಜನ ಉಪ ಯೋಜನೆಯಲ್ಲಿ ಒದಗಿಸಿರುವ ಅನುದಾನವನ್ನು ಈ ಆದೇಶದಲ್ಲಿ ನಿಗಧಿಪಡಿಸಿದಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ನೆರವಿನೊಂದಿಗೆ ಅನುಷ್ಠನಿಸಲಾಗುತ್ತಿರುವ ನಬಾರ್ಡ್‌ನ ಆರ್‌ಐಡಿಎಫ್ ಯೋಜನೆಯ ಮಾರ್ಗಸೂಚಿ ಅನ್ವಯ ಜಿ.ಟಿ.ಟಿ.ಸಿ.ಯಲ್ಲಿ ವರ್ಕ್‌ಷಾಪ್ (ಕಾರ್ಯಾಗಾರ) ತರತೇತಿ ಕಟ್ಟಡ ಹಾಗೂ ಕ್ಯಾಂಟೀನ್ ಕಟ್ಟಡ ಅಭಿವೃದ್ಧಿ ಕಾಮಗಾರಿಗಳಿಗಾಗಿ ಬಳಸತಕ್ಕದ್ದು. ಸದರಿ ಮೂಲಭೂತ ಸೌಕರ್ಯಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಧಿಮೆದಾರರಿಗೆ ನಿಯಮಾನುಸಾರ ಮೀಸಲಾತಿಯಂತೆ ತರಬೇತಿ ನೀಡುವುದು.

**ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಗಿರಿಜನ ಉಪ ಯೋಜನೆಯ ಅನುದಾನ**

ಅನುದಾನ ವಿನಿಯೋಗ ಮಾರ್ಗಸೂಚಿಗಳು:

ವಿಶಿಷ್ಟ ಕೌಶಲ್ಯಾಭಿವೃದ್ಧಿ ಸಂಸ್ಥೆಗಳು ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಸಂಪನ್ಮೂಲಗಳಿಂದ ವೆಚ್ಚವನ್ನು ಭರಿಸಿಕೊಂಡು ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳಿಗಾಗಿ ಸರ್ಕಾರದ ಆದೇಶ ಸಂಖ್ಯೆ 191 ಸಿಎಸ್ಸಿ 2013 ದಿನಾಂಕ 23.10.2013ರಲ್ಲಿನ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು. ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ರಡಿಯಲ್ಲಿ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಆಯಾ ವರ್ಷದ ಆಯವ್ಯಯದಲ್ಲಿ ಇಲಾಖೆಗೆ ಒದಗಿಸುವ ಅನುದಾನವನ್ನು ಬಳಸುವ ಪೂರ್ವದಲ್ಲಿ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ.

ಕಾರ್ಯಯೋಜನೆಗೆ ಸಮಾಜ ಕಲ್ಯಾಣ ಇಲಾಖೆಯ ಮೂಲಕ ರಾಜ್ಯ ಪರಿಷತ್‌ನ ಅನುಮೋದನೆಯನ್ನು ಪಡೆಯತಕ್ಕದ್ದು.

ಯೋಜನಾ ಆಯವ್ಯಯದಲ್ಲಿ ಒದಗಿಸಿರುವ ಇತರೆ ಸಂಪನ್ಮೂಲಗಳ (ಬಂಡವಾಳ ವೆಚ್ಚಗಳು ಇತ್ಯಾದಿ) ವಿನಿಯೋಗಕ್ಕಾಗಿ ಪ್ರಧಾನ ಕಾರ್ಯದರ್ಶಿಗಳ ಅನುಮೋದನೆಯನ್ನು ಪಡೆಯತಕ್ಕದ್ದು.

**ನಬಾರ್ಡ್ ಕಾಮಗಾರಿಗಳು**

ಆರ್ಥಿಕ ವಿನಿಯೋಗ ಮಾರ್ಗಸೂಚಿಗಳು:

ನಬಾರ್ಡ್ ಕಾಮಗಾರಿಗಳು, ನಬಾರ್ಡ್-ಪರಿಶಿಷ್ಟ ಜಾತಿ ಉಪ ಯೋಜನೆ, ನಬಾರ್ಡ್-ಗಿರಿಜನ ಉಪ ಯೋಜನೆಯಲ್ಲಿ ಒದಗಿಸಿರುವ ಅನುದಾನವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದ ನೆರವಿನೊಂದಿಗೆ ಅನುಷ್ಠನಿಸಲಾಗುತ್ತಿರುವ ನಬಾರ್ಡ್‌ನ ಆರ್‌ಐಡಿಎಫ್ ಯೋಜನೆಯ ಮಾರ್ಗಸೂಚಿ ಅನ್ವಯ ಜಿ.ಟಿ.ಟಿ.ಸಿ.ಯಲ್ಲಿ ವರ್ಕ್‌ಷಾಪ್ (ಕಾರ್ಯಾಗಾರ) ತರಬೇತಿ ಕಟ್ಟಡ ಹಾಗೂ ಕ್ಯಾಂಟೀನ್ ಕಟ್ಟಡ ಅಭಿವೃದ್ಧಿ ಕಾಮಗಾರಿಗಳಿಗಾಗಿ ಬಳಸತಕ್ಕದ್ದು. ನಬಾರ್ಡ್ -ಪರಿಶಿಷ್ಟ ಉಪ ಯೋಜನೆ, ನಬಾರ್ಡ್-ಗಿರಿಜನ ಉಪಯೋಜನೆ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಧಿಮೆದಾರರಿಗೆ ನಿಯಮಾನುಸಾರ ಮೀಸಲಾತಿಯಂತೆ ತರಬೇತಿ ನೀಡಲು ಮೂಲಭೂತ ಸೌಕರ್ಯಕ್ಕಾಗಿ ವಿನಿಯೋಗಿಸಬಹುದಾಗಿದೆ. ಕಾರ್ಯಯೋಜನೆಗೆ ಪ್ರಧಾನ ಕಾರ್ಯದರ್ಶಿಗಳ ಅನುಮೋದನೆ ಪಡೆಯತಕ್ಕದ್ದು.

ಈ ಆದೇಶದಲ್ಲಿ ವಿವರಿಸಿರುವ ಕಾರ್ಯಕ್ರಮಗಳ ಸಂಪನ್ಮೂಲಗಳಿಂದ ವೆಚ್ಚವನ್ನು ಭರಿಸಲು 2016-17ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 4851-00-102-0-09 ವಿಶಿಷ್ಟ ಕೌಶಲ್ಯಾಭಿವೃದ್ಧಿ ರ ಉಪ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಈ ಕೆಳಕಂಡಂತೆ ಅನುದಾನವನ್ನು ಹಂಚಿಕೆ ಮಾಡಲಾಗಿದ್ದು ಸದರಿ ಅನುದಾನವನ್ನು ಬಳಸಿಕೊಂಡು ಈ ಆದೇಶದ ಮಾರ್ಗಸೂಚಿಗಳ ಅನುಸಾರ ಯೋಜನಾ ಕಾರ್ಯಕ್ರಮವನ್ನು ಅನುಷ್ಠಾನವನ್ನು ಮುಂದುವರೆಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

| ಉಪ ಲೆಕ್ಕ ಶೀರ್ಷಿಕೆ | ಅನುದಾನ (ಲಕ್ಷ ರೂಗಳಲ್ಲಿ) |
|---|---|
| 132 ಬಂಡವಾಳ ವೆಚ್ಚಗಳು | 2058.00 |
| 133 ವಿಶೇಷ ಅಭಿವೃದ್ಧಿ ಯೋಜನೆ | 1059.00 |
| 135 ವಿಶೇಷ ಅಭಿವೃದ್ಧಿ ಯೋಜನೆ – ಎಸ್.ಸಿ.ಎಸ್.ಪಿ. | 310.00 |
| 136 ವಿಶೇಷ ಅಭಿವೃದ್ಧಿ ಯೋಜನೆ – ಟಿ.ಎಸ್.ಪಿ. | 131.00 |
| 422 ಪರಿಶಿಷ್ಟ ಜಾತಿ ಉಪ ಯೋಜನೆ | 610.00 |
| 423 ಗಿರಿಜನ ಉಪ ಯೋಜನೆ | 231.00 |
| 436 ನಬಾರ್ಡ್ ಕಾಮಗಾರಿಗಳು | 998.00 |

| ಉಪ ಲೆಕ್ಕ ಶೀರ್ಷಿಕೆ | ಅನುದಾನ (ಲಕ್ಷ ರೂಗಳಲ್ಲಿ) |
|---|---|
| 437 ನಬಾರ್ಡ್ - ಪ.ಜಾ. ಉಪ ಯೋಜನೆ | 77.00 |
| 438 ಗಿರಿಜನ ಉಪಯೋಜನೆ | 26.00 |
| **ಒಟ್ಟು 09 – ವಿಶಿಷ್ಟ ಕೌಶಲ್ಯ ಅಭಿವೃದ್ಧಿ ಸಂಸ್ಥೆಗಳು** | **5500.00** |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿ.ಆರ್. ರವೀಂದ್ರ)
**ಆಂತರಿಕ ಆರ್ಥಿಕ ಸಲಹೆಗಾರರು ಮತ್ತು**
**ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ**
**ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ**

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು, ಇವರಿಗೆ ಮುಂದಿನ ವಿಶೇಷ ಗೆಜೆಟ್‌ನಲ್ಲಿ ಪ್ರಕಟಿಸುವಂತೆ ಕೋರಿಕೆಯೊಂದಿಗೆ.

1) ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು-1.
2) ನಿರ್ದೇಶಕರು/ ಜಂಟಿ ನಿರ್ದೇಶಕರು(ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು-1.
3) ನಿರ್ದೇಶಕರು, ಕರ್ನಾಟಕ ರಾಜ್ಯ ಹುಜೂರ್ ಖಜಾನೆ, ಬೆಂಗಳೂರು-1.
4) ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು-1.
5) ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ-1), ವಿಧಾನಸೌಧ, ಬೆಂಗಳೂರು-1.
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು-1.
7) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ರಾಜಾಜಿನಗರ ಕೈಗಾರಿಕಾ ಹೊಸಹತು, ಬೆಂಗಳೂರು.
8) ಜಂಟಿ ನಿರ್ದೇಶಕರು (ಯೋಜನೆ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-1.
9) ಜಂಟಿ/ಅಪರ ನಿರ್ದೇಶಕರು (ಎಂ.ಎಸ್.ಎಂ.ಇ.), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.

10) ವ್ಯವಸ್ಥಾಪಕ ನಿರ್ದೇಶಕರು, ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ರಾಜಾಜಿನಗರ ರಾಜಾಜಿನಗರ ಕೈಗಾರಿಕಾ ಹೊಸಹತು, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು.

11) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಲೆಧರ್ ಟೆಕ್ನಾಲಜಿ, ಉಳ್ಳಾ ಉಪನಗರ, ಬಿಎಂಟಿಸಿ ಬಸ್‌ಸ್ಟಾಪ್ ಬಳಿ, ಬೆಂಗಳೂರು.